ಸವಿ ಸವಿ ನೆನಪು..

# ಚುಟುಕು ಕವಿಗೋಷ್ಠಿ ತಂದ ಪುಳಕ

ಬಾಳೆಹೊನ್ನೂರಿನ ರಂಭಾಪುರಿ ಮಠದಲ್ಲಿ ಸುಮಾರು 15 ವರ್ಷ ಹಿಂದೆ ನಡೆದ ಚುಟುಕು ಗೋಷ್ಠಿಯಲ್ಲಿ ಭಾಗವಹಿಸಿ ಸಮಾಧಾನಕರ ಬಹುಮಾನ ಪಡೆದದ್ದು ಇಂದಿಗೂ ನೆನೆಸಿದಾಗ ಪುಳಕ ಕೊಡುತ್ತದೆ.

■ ಸು.ವಿಜಯಲಕ್ಷ್ಮಿ ಶಿವಮೊಗ್ಗ

ಭಾಷಣ ಸ್ಪರ್ಧೆಗಳಲ್ಲಿ, ಚರ್ಚಾ ಗೋಷ್ಠಿಗಳಲ್ಲಿ, ಕವನ ವಾಚನಗಳಲ್ಲಿ, ಹಾಡು ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆಯುವುದು ಯಾವತ್ತಿಗೂ ಖುಷಿ ಕೊಡುವ ಅನುಭವವೇ. ಅದು ಮೊದಲ ಬಾರಿಗೆ ಬಂದ ಬಹುಮಾನ ವಂತೂ ಕೇಜಿ ಚಿನ್ನಕ್ಕೆ ಸಮ. ಆ ಅನುಭವದ ನೆನಪುಗಳನ್ನು ಮೆಲುಕು ಹಾಕುವುದು ಎಂದಿಗೂ ಆಪ್ಯಾಯಮಾನ. ಸವಿನೆನಪುಗಳ ಸಾಲಿನಲ್ಲಿ ಸೇರುವ ಈ ಅನುಭವ ಮನಸ್ಸಿಗೆ ನೆಮ್ಮದಿ, ಖುಷಿಯನ್ನೂ ನೀಡುತ್ತದೆ.

ಬಾಳೆಹೊನ್ನೂರಿನ ರಂಭಾಪುರಿ ವೀರ ಸಿಂಹಾಸನ ಮಹಾ ಪೀಠದಲ್ಲಿ 2003ರ ಮಾರ್ಚ್ 14ರಿಂದ ಮೂರು ದಿನಗಳ ಕಾಲ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಮತ್ತು ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾ ರಥೋತ್ಸವ ಅಂಗವಾಗಿ ರಾಜ್ಯಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನ ವನ್ನು ಆಯೋಜಿಸಲಾಗಿತ್ತು. ಇಲ್ಲಿ ಚುಟುಕು ವಾಚನ ಕಾರ್ಯಕ್ರಮವೂ ಇತ್ತು. ಆಯೋಜಕರು ತಿಳಿಸಿದಂತೆ ಐದು ಚುಟುಕಗಳನ್ನು ಅವರಿಗೆ ಮೊದಲೇ ಕಳುಹಿಸಿ ಕೊಡಲಾಗಿದ್ದು, ಅದರಲ್ಲಿನ ಆಯ್ಕೆಯಾದ ಮೂರು ಚುಟುಕುಗಳನ್ನು ಚುಟುಕು ಕವಿಗೋಷ್ಠಿಯಲ್ಲಿ ವಾಚನ ಮಾಡಬೇಕಾಗಿತ್ತು. ನಾನು ಐದು ಚುಟುಕಗಳನ್ನು ಮೊದಲೇ ಕಳುಹಿಸಿದ್ದು, ಚುಟುಕು ಕವಿ ಗೋಷ್ಠಿಯಲ್ಲಿ ಚುಟುಕು ವಾಚನ ಮಾಡಲು ಆಯ್ಕೆಯಾಗಿದ್ದೆ. ನನ್ನ ಸಂಭ್ರಮ ಹೇಳತೀರದು. ಚುಟುಕು ಕವಿಗೋಷ್ಠಿಯಲ್ಲಿ ಭಾಗವಹಿಸುವುದು ಒಂದು ಕಡೆಯಾದರೆ, ಮತ್ತೊಂದೆಡೆ ಬಾಳೆಹೊನ್ನೂರಿನಲ್ಲಿ ಗೆಳತಿಯ ಮನೆ ಇದ್ದದ್ದು. ಎಲ್ಲಕ್ಕಿಂತ ಹೆಚ್ಚಾಗಿ ಶಿವಮೊಗ್ಗದಿಂದ ಬಾಳೆಹೊನ್ನೂರಿನ ರಂಭಾಪುರಿ ಮಠಕ್ಕೆ ಹೋಗುವ ದಾರಿಯಲ್ಲಿನ ಪ್ರಕೃತಿಯನ್ನು ನೋಡಿ ಸಂತೋಷಪಡುವ ಅವಕಾಶ ಸಿಕ್ಕಿದ್ದು.

ನನಗೆ ಚುಟುಕು ಕವಿಗೋಷ್ಠಿಯಲ್ಲಿ ಭಾಗವಹಿಸುವ ಹಿಂದಿನ ದಿನ ಮಧ್ಯಾಹ್ನ ಊಟ ಮುಗಿಸಿ ಶಿವಮೊಗ್ಗದಿಂದ ಬಾಳೆಹೊನ್ನೂರಿಗೆ ಬಸ್ಸಿನಲ್ಲಿ ಕಿಟಕಿಯ ಪಕ್ಕದಲ್ಲಿನ ಸೀಟನ್ನು ಕಷ್ಟಪಟ್ಟು ಗಿಟ್ಟಿಸಿಕೊಂಡು ಕುಳಿತೆ. ಬಸ್ಸು ಶಿವಮೊಗ್ಗ ಬಿಡುತ್ತಿದ್ದಂತೆಯೇ ಪ್ರಕೃತಿಯ ಸೊಬಗನ್ನು ಆಸ್ವಾದಿಸತೊಡಗಿದೆ. ನರಸಿಂಹ ರಾಜಪುರ ದಾಟಿದ ಮೇಲಂತೂ, ನೋಡಿದಷ್ಟೂ ಪ್ರಕೃತಿ ಸುಂದರಿಯಾಗಿ ಕಾಣತೊಡಗಿದ್ದಳು. ಬಾಳೆಹೊನ್ನೂರು ಬಂದಿದ್ದು ತಿಳಿಯಲೇ ಇಲ್ಲ. ಇನ್ನೂ ಎಷ್ಟು ಹೊತ್ತು ಹಾಗೆಯೇ ಕುಳಿತಿರುತ್ತಿದ್ದೆನೋ ಏನೋ ಗೆಳತಿ ಬಸ್ ಸ್ಟ್ಯಾಂಡಿಗೆ ಬಂದವಳು ನನ್ನ ಹೆಸರು ಹಿಡಿದು ಕೂಗತೊಡಗಿದಾಗ, ಬ್ಯಾಗು ಎತ್ತಿಕೊಂಡು ಬಸ್ಸಿನಿಂದ ಕೆಳಗೆ ಇಳಿದೆ. ಇಬ್ಬರೂ ಆಟೋದಲ್ಲಿ ಅವಳ ಮನೆಗೆ ಹೋದೆವು. ಅವಳ ಆತಿಥ್ಯ ಎಂದಿಗೂ ಮರೆಯುವಂತಿಲ್ಲ.

ಮರುದಿನ ಬೆಳಿಗ್ಗೆ ಬೇಗ ಎದ್ದು, ಸ್ನಾನ ಮಾಡಿ, ಕಾಫಿ ತಿಂಡಿ ಮುಗಿಸಿ ಗೆಳತಿಯಿಂದ ಬೀಳ್ಕೊಂಡು, ಬಸ್‌ಸ್ಟ್ಯಾಂಡಿಗೆ ಬಂದೆ. ರಂಭಾಪುರಿ ಮಹಾಪೀಠಕ್ಕೆ ಹೋಗುವ ವಿಶೇಷ ಬಸ್ ನಿಂತಿತ್ತು. ಬಸ್ ಹತ್ತಿ ಮಠದ ಹತ್ತಿರ ನಿಂತಾಗ ಇಳಿದು ಸುತ್ತಲೂ ನೋಡಿದಾಗ ಅಲ್ಲಿದ್ದದ್ದು ಅದ್ಭುತ, ರಮಣೀಯ ನೋಟ. ರಂಭಾಪುರಿ ಮಠದೊಳಗೆ ಹೋದಾಗ ಇನ್ನೂ ಚಕಿತಗೊಂಡೆ. ಸಾವಿರಾರು ಜನರು ಕುಳಿತುಕೊಳ್ಳಬಹುದಾದ ವಿಶಾಲವಾದ ಸಭಾಂಗಣ. ವೇದಿಕೆ ಕೂಡ ಇತ್ತು. ಕಾರ್ಯಕ್ರಮದ ಆಯೋಜಕರು ಆವರಣದಲ್ಲಿಯೇ ಕುಳಿತು ಎಲ್ಲರನ್ನೂ ಸ್ವಾಗತಿಸುತ್ತಿದ್ದರು. ನಾನು ಅವರಿಗೆ ವಂದಿಸುತ್ತಾ ಚುಟುಕು ಕವನ ವಾಚನ ಮಾಡಲು ಬಂದಿರುವುದಾಗಿ ತಿಳಿಸಿ, ನನ್ನ ಹಾಜರಿಯನ್ನು ಖಚಿತಪಡಿಸಿದೆ.

ಚುಟುಕು ವಾಚನ ಕಾರ್ಯಕ್ರಮ ಆರಂಭವಾಯಿತು. ಆಯೋಜಕರು ಒಂದು ಸಲಕ್ಕೆ ಐದು ಜನ ಚುಟುಕು ಕವಿಗಳನ್ನು ವೇದಿಕೆ ಆಹ್ವಾನಿಸಿ, ಅವರು ಹೆಸರು ಹೇಳಿದಂತೆ ಒಬ್ಬೊಬ್ಬರೇ ಚುಟುಕು ವಾಚಿಸಲು ತಿಳಿಸಿದರು. ಐದು ಜನರ ತಂಡದಲ್ಲಿ ನಾನು ಐದನೆಯವಳಾಗಿದ್ದೆ. ಮೊದಲು ಹೋದ ನಾಲ್ಕು ಪುರುಷ ಚುಟುಕು ಕವಿಗಳು ಎಲ್ಲಾ ಕುರ್ಚಿಗಳನ್ನು ಆಕ್ರಮಿಸಿದ್ದರಿಂದ ನನಗೆ ಸ್ವಾಮೀಜಿಯವರ ಪಕ್ಕದಲ್ಲಿದ್ದ ಕುರ್ಚಿ ಮಾತ್ರ ಖಾಲಿ ಇತ್ತು. ನಾನು ಸಂಕೋಚದಿಂದ ಅತ್ತಿತ್ತ ನೋಡುತ್ತಿದ್ದಾಗ, ಸ್ವಾಮೀಜಿಯವರೇ 'ಕುಳಿತು ಕೊಳ್ಳಬಹುದು ದಯವಿಟ್ಟು ಕುಳಿತುಕೊಳ್ಳಿ' ಎಂದು ಹೇಳಿದಾಗ ಅವರಿಗೆ ನಮಸ್ಕರಿಸಿ, ಕುಳಿತುಕೊಂಡೆ. ಆ ದಿವ್ಯ ಚೇತನ ಸ್ವಾಮೀಜಿಯವರೆಲ್ಲಿ? ನನ್ನಂತಹ ಸಾಮಾನ್ಯ ಮಹಿಳೆಯೆಲ್ಲಿ? ನನಗೆ ಅವರ ಪಕ್ಕದಲ್ಲಿ ಕುಳಿತುಕೊಳ್ಳುವ ಭಾಗ್ಯ ಸಿಕ್ಕಿದ್ದು, ನಿಜವಾಗಲೂ ಪೂರ್ವ ಜನ್ಮದ ಸುಕೃತವೇನೋ ಎನಿಸಿತು! ನಿಜವಾಗಿಯೂ ಅದೊಂದು ಅಪೂರ್ವ ಹಾಗೂ ಮರೆಯಲಾಗದ ಕ್ಷಣ. ಸಂತೋಷ, ಸಂಕೋಚದಿಂದ ಕುಳಿತು ನನ್ನ ಸರದಿ ಬಂದಾಗ ಚುಟುಕುಗಳನ್ನು ವಾಚನ ಮಾಡಿದೆ.



ಬಾಳೇಹೊನ್ನೂರಿನ ರಂಭಾಪುರಿ ಮಠದಲ್ಲಿ ನಡೆದ ಚುಟುಕು ಕವಿಗೋಷ್ಠಿಯಲ್ಲಿ ಸಿ.ಪಿ. ಕೃಷ್ಣಕುಮಾರ್ (ಸಿ.ಪಿ.ಕೆ.) ಅವರಿಂದ ಬಹುಮಾನ ಪಡೆದ ಕ್ಷಣ.

ಎಲ್ಲರ ಚುಟುಕು ವಾಚನ ಮುಗಿಯುವ ಹೊತ್ತಿಗೆ ಮಧ್ಯಾಹ್ನವಾಗಿತ್ತು. ಉಚಿತ ಊಟದ ವ್ಯವಸ್ಥೆಯನ್ನೂ ಮಾಡಿದ್ದರು. ಊಟದ ನಂತರ ಬಹುಮಾನ ವಿತರಣೆ ಕಾರ್ಯಕ್ರಮವಿತ್ತು. ನನಗೆ ಚುಟುಕು ವಾಚನದಲ್ಲಿ ಸಮಾಧಾನಕರ ಬಹುಮಾನ ಬಂದಿತ್ತು. ಆ ಬಹುಮಾನವನ್ನು ನೀಡಿದವರು ಸಿ.ಪಿ. ಕೃಷ್ಣಕುಮಾರ್ (ಸಿ.ಪಿ.ಕೆ.)ರವರು ಪ್ರಶಸ್ತಿ ಪತ್ರದೊಂದಿಗೆ ಪುಸ್ತಕವನ್ನು ಬಹುಮಾನವಾಗಿ ನೀಡಲಾಗಿತ್ತು. ಅಲ್ಲಿಯೇ ಬಹುಮಾನ ಬಂದ ಪುಸ್ತಕದ ಕವರನ್ನು ತೆರೆದು ನೋಡಿದೆ. ಅದು ನನ್ನ ಪ್ರೀತಿಯ, ನನ್ನ ನೆಚ್ಚಿನ, ನನಗೆ ಹಿಂದೆ, ಇಂದು ಮತ್ತು ಮುಂದೂ ಕೂಡ ಮನಸ್ಸಿಗೆ ಸಮಾಧಾನ ನೀಡಿದ್ದ ಹಾಗೂ ನೀಡುವ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಆಗಿತ್ತು. ಈ ಎಲ್ಲ ನೆನಪುಗಳು ಎಂದಿಗೂ ಅಜರಾಮರವಾಗಿ ಉಳಿದಿದೆ. ■